Event : Mysore District Level weight lifting Competition

Date : 26-11-2021

Place : College Campus.

Result: our students won 2 Gold medals, 3 Silver medals, 2 bronze medals











ಆಂದೋಲನ

## ಜಿಲ್ಲಾ ವೆಯ್ಟ್ ಲಿಫ್ಟಿಂಗ್ ತಂಡಕ್ಕೆ ಸಮಗ್ರ ಪ್ರಶಸ್ತಿ

### 235 ಕೆ.ಜಿ. ಭಾರ ಎತ್ತುವ ಮೂಲಕ ಎಂ.ವಾಸು ಬೆಸ್ಟ್ ಲಿಫ್ಟರ್ ಪ್ರಶಸ್ತಿಗೆ ಭಾಜನ

ಮೈಸೂರು: ಮೈಸೂರು ಜಿಲ್ಲಾ ವೆಯ್ಟ್ ಲಿಫ್ಟಿಂಗ್ ತಂಡವು ಜಿಲ್ಲಾಮಟ್ಟದ ಸಮಗ್ರ ತಂಡ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ಎಂ.ವಾಸು ಅವರು 235 ಕೆ.ಜಿ. ಭಾರ ಎತ್ತುವ ಮೂಲಕ ಬೆಸ್ಟ್ ಲಿಫ್ಟರ್ ಪ್ರಶಸ್ತಿ ಪಡೆದು ನೂತನ ದಾಖಲೆ ನಿರ್ಮಿಸಿದ್ದಾರೆ.

ಮೈಸೂರು ಜಿಲ್ಲಾಮಟ್ಟದ 2021-22ನೇ ಪುರುಷರ ಮತ್ತು ಮಹಿಳೆಯರ ವೆಯ್ಟ್ ಲಿಫ್ಟಿಂಗ್ ಸ್ಪರ್ಧೆ ನಗರದ ಶೇಷಾದ್ರಿಪುರಂ ಪದವಿ ಕಾಲೇಜು ಮತ್ತು ಮೈಸೂರು ಜಿಲ್ಲಾ ವೆಯ್ಟ್ ಲಿಫ್ಟಿಂಗ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಇಂಡಿಯನ್ ವೆಯ್ಟ್ ಲಿಫ್ಟಿಂಗ್ ಫೆಡರೇಷನ್ ಕಾರ್ಯದರ್ಶಿ ಆನಂದೇಗೌಡ ಭಾಗವಹಿಸಿದ್ದರು.

ಅತಿಥಿಗಳಾಗಿ ಶ್ಯಾಮಲಾ ಶೆಟ್ಟಿ, ಕಾಲೇಜಿನ ಪ್ರಾಂಶುಪಾಲರಾದ ಸೌಮ್ಯ ಈರಪ್ಪ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಸುರೇಶ್, ಸೋಮಾನಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ, ಮೈಸೂರು ಜಿಲ್ಲಾ ವೆಯ್ಟ್ ಲಿಫ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಡಾ.ಸದಾಶಿವ ಭಟ್, ಉಪಾಧ್ಯಕ್ಷ ಗುರುಮೂರ್ತಿ ಭಟ್, ಕಾರ್ಯದರ್ಶಿ ಶಿವರಾಮ್ ಹಾಗೂ ಶೇಷಾದ್ರಿಪುರಂ ಕಾಲೇಜಿನ ದೈಹಿಕ ನಿರ್ದೇಶಕ ಡಾ.ರಾಘವೇಂದ್ರ ಹಾಜರಿದ್ದರು.

ಈ ಸ್ಪರ್ಧೆಯಲ್ಲಿ ಮೈಸೂರು ಜಿಲ್ಲಾ ವೆಯ್ಟ್ ಲಿಫ್ಟಿಂಗ್ ತಂಡ ಸಮಗ್ರ ತಂಡ ಪ್ರಶಸ್ತಿಯನ್ನು ಪಡೆದಿದೆ. ಮೈಸೂರು ಬೆಸ್ಟ್ ಲಿಫ್ಟರ್ ಪ್ರಶಸ್ತಿಗೆ ಎಂ.ವಾಸು ಭಾಜನರಾಗಿದ್ದಾರೆ. ಅವರು 235 ಕೆ.ಜಿ. ಭಾರ ಎತ್ತುವ ಮೂಲಕ ಹೊಸ ದಾಖಲೆಯನ್ನು ನಿರ್ಮಿಸಿದ್ದಾರೆ. ಮೈಸೂರು ಜಿಲ್ಲಾಮಟ್ಟದ ತರಬೇತುದಾರರಾದ ಪರಂಜ್ಯೋತಿ ಬಿ.ಆರ್.ಸಂತೋಷ್ ಹಾಗೂ ಉಲ್ಲಾಸ್ ಗೌಡ ಅವರು ಪಾಲ್ಗೊಂಡರು.

Event : Annual Sports Day

Date : 30-07-2022

Place : Muda Sports Ground Vijayanagara

Result: Girls Section -Mamatha

Boys Section - Rohith Final Year B.Com -Individual championship












